ಅ) ರೂ 3.20 ಲಕ್ಷ ಬಿಡುಗಡೆ ಮಾಡಲಾಗಿದೆ.

ಆ) 1) ಶ್ರೀಲಕ್ಷ್ಮೀದೇವರು, ಎಚನಹಳ್ಳಿ 25,000-00 (ನಿರ್ಮಾಣ)

(2) ಶ್ರೀ ಶಂಬುಲಿಂಗೇಶ್ವರಸ್ವಾಮಿ ದೇವರು ಅಂಬೇಡ್ಕರ್ ನಗರ ಹೊಳೆನರಸೀಪುರ ಟೌನ್ 25,000-00 (ರಿಪೇರಿ)

(3) ಶ್ರೀ ಚನ್ನವೀರಸ್ವಾಮಿ ತೇಜೂರು 25,000-00 (ನಿರ್ಮಾಣ)

(4) ಶ್ರೀ ಕನ್ನಂಬಾಡಿಅಮ್ಮ ರಂಗೇನಹಳ್ಳಿ 25,000-00 (ನಿರ್ಮಾಣ)

ಇ) 1994-95ನೇ ಸಾಲಿನಲ್ಲಿ ಆರಾಧನಾ ಯೋಜನೆಯಡಿಯಲ್ಲಿ ಈವರೆಗೆ 2 ಕೋಟಿ ರೂಗಳನ್ನು ಬಿಡುಗಡೆ ಮಾಡಿದ್ದು ಆ ಪೈಕಿ ಹಾಸನ ಜಿಲ್ಲೆಗ 7,14,285-00 ರೂ.ಗಳನ್ನು ನಿಗದಿಸಿದೆ.

ಈ) ಹಾಸನ ಜಿಲ್ಲೆಗೆ ನೀಡಲಾದ ಒಟ್ಟು ಹಣದಲ್ಲಿ ಪ್ರತಿವಿಧಾನ ಸಭಾ ಕ್ಷೇತ್ರಕ್ಕೆ ರೂ. 89285 ಗಳಂತೆ ಹೊಳೆ ನರಸೀಪುರ ಕ್ಷೇತ್ರಕ್ಕೆ ರೂ. 89,285-00 ರೂ.ಗಳು ನೀಡಬಹುದಾಗಿದೆ.

ಉ) ಹೌದು.

ಬ್ರಹ್ಮಾವರ ಕ್ಷೇತ್ರದಲ್ಲಿ ರಸ್ತೆ ದೀಪಗಳು

200 - ಶ್ರೀ ಪಿ. ಬಸವರಾಜ್ (ಬ್ರಹ್ಮಾವರ) : ಮಾನ್ಯ ಇಂಧನ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ಬ್ರಹ್ಮಾವರ ವಿಧಾನ ಸಭಾ ಕ್ಷೇತ್ರದ ವ್ಯಾಪ್ತಿಯಲ್ಲಿ ರಾಷ್ಟ್ರೀಯ ಮತ್ತು ರಾಜ್ಯ ಹೆದ್ದಾರಿಗಳ ಪಕ್ಕದಲ್ಲಿ ಬಹುತೇಕ ಬೀದಿ ದೀಪಗಳು ರಾತ್ರಿ ವೇಳೆಯಲ್ಲಿ ಉರಿಯದೇ ಇರುವುದು ವಿದ್ಯುತ್ ಮಂಡಳಿಯ ಗಮನಕ್ಕೆ ಬಂದಿದೆಯೇ, ಬಂದಿದ್ದಲ್ಲಿ ಕೈಗೊಂಡ ಕ್ರಮಗಳೇನು?

ಆ) ಇದರಿಂದಾಗಿ ರಾತ್ರಿ ವೇಳೆಯಲ್ಲಿ ಸಂಚರಿಸುವ ವಾಹನಗಳಿಗೆ ಹಾಗೂ ಸಾರ್ವಜನಿಕರಿಗೆ ತೀವ್ರ ತರಹದ ತೊಂದರೆಗಳು ಉಂಟಾಗಿ ಸಂಚಾರಕ್ಕೆ ಅನಾನುಕೂಲವಾಗಿರುವುದು ನಿಜವಲ್ಲವೇ, ಮಂಡಳಿಯು ಈ ಸಮಸ್ಯೆಯನ್ನು ಪರಿಹರಿಸಲು ಸಕಾಲಿಕ ಕ್ರಮಗಳನ್ನು ಕೈಗೊಳ್ಳುವುದೇ?

ಶ್ರೀ ವಿ. ಮುನಿಯಪ್ಪ (ಇಂಧನ ರಾಜ್ಯ ಸಚಿವರು) :

ಅ) ಮತ್ತು ಆ) ಹೌದು ಬಂದಿದೆ. ಕೆಟ್ಟಿರುವ ಬೀದಿ ದೀಪಗಳ ದುರಸ್ತಿ ಕಾರ್ಯವನ್ನು ಸಂಬಂಧಿಸಿದ ಗ್ರಾಮ ಪಂಚಾಯಿತಿ ಮತ್ತು ಪುರಸಭೆಗಳೇ ನಿರ್ವಹಿಸುತ್ತಿವೆ. ದುರಸ್ತಿಪಡಿಸಲಾದ ಕೊಳವೆ ದೀಪಗಳ ಫಿಟ್ಟಿಂಗ್‌ಗಳನ್ನು ಗ್ರಾಮ ಪಂಚಾಯಿತಿ : ಪುರಸಭೆ ಒದಗಿಸಿದ ನಂತರ, ಮಂಡಳಿ ಅಳವಡಿಸುವ ಕ್ರಮ ತೆಗೆದುಕೊಳ್ಳುತ್ತದೆ.

ಕೋಟೆ ವೆಂಕಟರಮಣ ಸ್ವಾಮಿ ದೇವಸ್ಥಾನದ ಆಸ್ತಿ ಕುರಿತು

535 - ಶ್ರೀ ಕೆ. ಸೋಮಪ್ಪ ಸುವರ್ಣ (ಮೂಡಬಿದರೆ) : ಮಾನ್ಯ ಮುಜರಾಯಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ಬೆಂಗಳೂರು ನಗರದ ಕೋಟೆ ವೆಂಕಟರಮಣ ಸ್ವಾಮಿ ದೇವಾಲಯಕ್ಕೆ ಸೇರಿದ ಆಸ್ತಿಯ ವಿವರಗಳೇನು: (ಕಟ್ಟಡ ಹಾಗೂ ಜಾಗದ ಬಗ್ಗೆ ಪ್ರತ್ಯೇಕ ವಿವರಗಳನ್ನು ಒದಗಿಸುವುದು).

ಆ) ಈ ದೇವಾಲಯಕ್ಕೆ ದಾನವಾಗಿ ಕೊಟ್ಟಿರುವ ಜಾಗ ಇಲ್ಲವೆ ಕಟ್ಟಡದ ವಿವರಗಳೇನು?

ಇ) ದೇವಾಲಯಕ್ಕೆ ಸೇರಿದ ಕಟ್ಟಡವನ್ನು ಬಾಡಿಗೆ ಅಥವಾ ಲೀಸ್ ಆಧಾರದ ಮೇಲೆ ಯಾರಿಗೆ ವಹಿಸಿಕೊಡಲಾಗಿದೆ: (ವಹಿಸಿಕೊಂಡಿರುವರ ಹೆಸರು ಪದನಾಮ ವಿವರಗಳನ್ನು ಒದಗಿಸುವುದು)

ಈ) ಈ ಕಟ್ಟಡವನ್ನು ಬಾಡಿಗೆ ಅಥವಾ ಲೀಸ್ ಆಧಾರದ ಮೇಲೆ ವಹಿಸಿಕೊಡುವಾಗ ಯಾವ ಯಾವ ಮಾನದಂಡವನ್ನು ಅನುಸರಿಸಲಾಯಿತು.

ಉ) ವೃತ್ತ ಪತ್ರಿಕೆಗಳಲ್ಲಿ ಜಾಹೀರಾತನ್ನು ನೀಡಲಾಗಿತ್ತೇ; ನೀಡಲಾಗಿದ್ದರೆ ಅದರ ವಿವರಗಳನ್ನು ಒದಗಿಸುವುದು.

ಊ) ನಿಯಮಗಳನ್ನು ಉಲ್ಲಂಘನೆ ಮಾಡಿ ಪ್ರಭಾವಿ ವ್ಯಕ್ತಿಗಳಿಗೆ ದೇವಾಲಯಕ್ಕೆ ಸೇರಿದ ಕಟ್ಟಡವನ್ನು ವಹಿಸಿಕೊಟ್ಟಿರುವುದು ನಿಜವೇ?

ಋ) ಇವರುಗಳನ್ನು ಕೂಡಲೇ ತೆರವು ಮಾಡಿಸಲು ಕ್ರಮ ಕೈಗೊಳ್ಳಲಾಗುವುದೇ?

ಶ್ರೀ ಹಾರ್ನಳ್ಳಿ ರಾಮಸ್ವಾಮಿ (ಮುಜರಾಯಿ ಸಚಿವರು) :

ಅ) ಆಸ್ತಿಯ ವಿವರಗಳು

(1) ದೇವಾಲಯಕ್ಕೆ ಹೊಂದಿಕೊಂಡಂತೆ ಇರುವ 10 X 10 ವಿಸ್ತೀರ್ಣದ 5 ಅಂಗಡಿಗಳು

(2) ಜಯನಗರದಲ್ಲಿ 4 ಮನೆಗಳು ಮತ್ತು 14 X 8 ಅಡಿ ವಿಸ್ತೀರ್ಣದ 1 ಅಂಗಡಿ

(3) ಪ್ಯಾಲೆಸ್ ಗುಟ್ಟಹಳ್ಳಿಯಲ್ಲಿ 25 X 25 ವಿಸ್ತೀರ್ಣದ 1 ಮನೆ

ಆ) (1) ದಾನವಾಗಿ ನೀಡಲಾದ ಯಾವ ಜಾಗಗಳಿಲ್ಲ.

(2) ದಾನವಾಗಿ ನೀಡಲಾದ ಕಟ್ಟಡಗಳ ವಿವರಗಳು

(ಅ) ದಿ: ರಾಮಯ್ಯನವರಿಂದ ಜಯನಗರದಲ್ಲಿ 4 ಮನೆ ಮತ್ತು 1 ಅಂಗಡಿ

(ಆ) ಶ್ರೀ ಹೆಚ್. ಸೀತಾರಾಮಯ್ಯರವರಿಂದ ಪ್ಯಾಲೇಸ್‌ಗುಟ್ಟಹಳ್ಳಿಯ 1 ಮನೆ.

ಇ) ವಿವರಗಳನ್ನು ಅನುಬಂದ 'ಅ' ನಲ್ಲಿ ನೀಡಿದೆ.

ಉ) ಸಿಆಸಂಖ್ಯೆ : ಆರ್‌ಡಿ: 67 : ಎಂಎಲ್‌ಡಿ: 79 ದಿ : 10-10-80 ಹಾಗೂ ಆರ್‌ಡಿ :33:ಎಂಎಲ್‌ಡಿ:88 ದಿ:26-9-90ರ ಕ್ರಮವನ್ನು ಅನುಸರಿಸಿ ನೀಡಿದೆ.

ಉ) ವೃತ್ತ ಪತ್ರಿಕೆಗಳಲ್ಲಿ ಜಾಹೀರಾತನ್ನು ನೀಡಿರುವುದಿಲ್ಲ.

ಊ) ನಿಜವಲ್ಲ.

ಋ) 'ಊ'ನಲ್ಲಿ ನೀಡಿದ ಉತ್ತರದಿಂದ ಈ ಪ್ರಶ್ನೆ ಉದ್ಭವಿಸುವುದಿಲ್ಲ.

ಅನುಬಂಧ - ಅ

ಬೆಂಗಳೂರು ಸಿಟಿ ಕೋಟೆ ಶ್ರೀ ವೆಂಕಟರಮಣಸ್ವಾಮಿ ದೇವಾಲಯ ಗುತ್ತಿಗೆ : ಬಾಡಿಗೆದಾರರ ವಿವರ

		ಗುತ್ತಿಗೆದಾರರ ಹೆಸರು	ವಿಸ್ತೀರ್ಣ	ಹಾಲಿ ತಿಂಗಳ ಬಾಡಿಗೆ	ನೀಡುತ್ತಿರುವ
ಅ)	ಕೋಟೆ ಶ್ರೀ ವೆಂಕಟರಮಣಸ್ವಾಮಿ ದೇವಾಲಯದ ಆವರಣದ ಅಂಗಡಿಗಳ ವಿವರ?	1) ಶ್ರೀ ಹೆಚ್.ಎನ್. ಶಿವರುದ್ರಪ್ಪ (ವ್ಯಾಪಾರಸ್ಥರು)	10 x 10	ರೂ.450-00	ಅಂಗಡಿಗಳು
		2) - " -	10 x 10	450-00	"
		3) ಶ್ರೀ ಬಿ.ಎಂ. ಮಂಜುನಾಥ್ (ವ್ಯಾಪಾರಸ್ಥರು)	10 x 10	450-00	"
		4) ಶ್ರೀ ಕೆ.ಟಿ. ರಾಜಶೇಖರ್ (ವ್ಯಾಪಾರ)	10 x 10	450-00	"
		5) ಶ್ರೀ ಡಿ. ಪಾಂಡುರಂಗ (ವ್ಯಾಪಾರ)	10 x 10	450-00	"
ಆ)	ದಿ:ರಾಮಯ್ಯನವರ ಮನೆ ಮತ್ತು ಅಂಗಡಿ	1) ಶ್ರೀ ಬಿ.ವಿ. ಶ್ರೀಧರ್ (ಶೀಘ್ರಲಿಪಿಗಾರರು) ಧಾರ್ಮಿಕ ದತ್ತಿ ಇಲಾಖೆ, ಬೆಂಗಳೂರು.	$26\frac{1}{2} \times 26\frac{1}{2}$	ಒಟ್ಟು ಸಂಬಳದಶೇಕಡ10	ಮನೆ
		2) ಶ್ರೀ ಬಸವರಾಜ ಹೊರಟ್ಟಿ (ವಿಧಾನ ಪರಿಷತ್ತಿನ ಸದಸ್ಯರು)	19 x 25	495-00	ಮನೆ
		3) ಶ್ರೀ ಲಕ್ಷ್ಮೀನಾರಾಯಣ ಸಮೂಹ 'ಡಿ' ನೌಕರರು ಜಿಲ್ಲಾಧಿಕಾರಿ ಗಳ ಕಛೇರಿ, ಬೆಂಗಳೂರು	10 x 20		
		4) ಶ್ರೀ ಟಿ.ವಿ. ಕೃಷ್ಣನ್, ಖಾಸಗಿ ವ್ಯಕ್ತಿ	15 x 26	140-00	"
		5) ಶ್ರೀ ಎಂ.ಜಿ. ಶ್ರೀಕಾಂತ್ (ರವಿಕುಮಾರ್, ಬಾಬು) (ವ್ಯಾಪಾರ)	14 x 8	140-00	ಅಂಗಡಿ
ಇ)	ಶ್ರೀ ಹೆಚ್. ಸೀತಾರಾಮಯ್ಯನವರ ಮನೆ : ಪ್ಯಾಲೇಸ್ ಗುಟ್ಟಹಳ್ಳಿ.	1) ಎಂ.ಸಿ. ಕೃಷ್ಣಪ್ಪ (ಗೀತಾಸ್ವಾಮಿ)	25 x 25	75-00	ಮನೆ